ಜಾತಿ ಪ್ರಮಾಣ ಪತ್ರಗಳ ಬಗ್ಗೆ.

೧೯೫೫. ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಖ್ಯ ಮಂತ್ರಿಗಳ ಮತ್ತು ಸಮಾಜ ಕಲ್ಯಾಣ ಸಚಿವರ ಆದೇಶಾನುಸಾರ ಸಂಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪಡೆದು ಸರ್ಕಾರಿ ಸೇವೆಗೆ ಸೇರಿದವರ ವಿರುದ್ಧ ಹೂಡಲಾದ ಪೊಕದ್ದಮೆಗಳನ್ನು ತಡೆಹಿಡಿಯುವಂತೆ ಗೃಹ ಕಾರ್ಯದರ್ಶಿಗಳು ಹೆಚ್‌ಡಿ ೬೮ ಪಿಸಿಆರ್ ೬೫ ದಿನಾಂಕ ೩–೧೦–೧೯೬೫ ರಲ್ಲಿ ಹೊರಡಿಸಿದ ಸುತ್ತೋಲೆ ಸೂಚನೆಗಳನ್ನು ಮತ್ತು ತದನಂತರದ ಸರ್ಕಾರಿ ಆದೇಶಗಳನ್ನು ಹಿಂತೆಗೆದು ಕೊಳ್ಳುವಂತೆ ಅಥವಾ ರದ್ದು ಮಾಡುವಂತೆ ಸರ್ಕಾರಕ್ಕೆ ಭಾರತ ಸರ್ಕಾರದ ಕಲ್ಯಾಣ ಸಚಿವಾಲಯ ದಿಂದ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸರಕಾರವು ಕೇಂದ್ರ ಸರ್ಕಾರದ ನಿರ್ದೇಶನಗಳನ್ವಯ ತೆಗೆದುಕೊಂಡ ಕ್ರಮ.

ಶ್ರೀ ವಿ. ಎಲ್. ಪಾಟೀಲ್(ಸಮಾಜ ಕಲ್ಯಾಣ ಸಚಿವರು) —

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಪಾಲಿಟೆಕ್ನಿಕ್ ಉಪನ್ಯಾಸಕರ ವೇತನದ ಬಗ್ಗೆ.

೧೬೦೧. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ತನ್ನ ಆದೇಶ ಸಂಖ್ಯೆ :ಎಫ್‌ಡಿ ೫೫ ಎಸ್‌ಆರ್‌ಪಿ ೬೫ (ಬೆಂಗಳೂರು) ದಿನಾಂಕ ೩೦–೧೦–೧೯೬೫ರಲ್ಲಿ ಪಾಲಿಟೆಕ್ನಿಕ್‌ಗಳ ಉಪನ್ಯಾಸಕರ ವೇತನ ಶ್ರೇಣಿಯನ್ನು ರೂ. ೪೨೦—೧೨೨೫ ರಿಂದ ರೂ. ೧೦೫೦—೧೯೫೦ ರವರೆಗೆ ಪರಿಷ್ಕರಿಸಿರುವುದೇ,

ಆ) ಸರ್ಕಾರವು ತನ್ನ ಇನ್ನೊಂದು ಆದೇಶ ಸಂಖ್ಯೆ. ಎಫ್‌ಡಿ ೫೫ ಎಸ್‌ಆರ್‌ಪಿ ೬೫ ದಿನಾಂಕ ೧೯–೧೨–೧೯೬೫ರ ಮೂಲಕ ಮೊದಲಿನ ಸರ್ಕಾರಿ ಆದೇಶವನ್ನು ಮಾರ್ಪಾಡು ಮಾಡಿ ಈ ಪರಿಷ್ಕರಣವು ಇಂಜಿನಿಯರಿಂಗ್ ಪದವೀಧರರಾದ ಉಪನ್ಯಾಸಕರಿಗೆ ಮಾತ್ರ ಅನ್ವಯಿಸಿರುವುದೇ,

ಇ) ಈ ಕಾರಣದಿಂದ, ಇಲ್ಲಿಯವರೆಗೂ ವೇತನ ಸಂಬಂಧದಲ್ಲಿ ಇಂಜಿನಿಯರಿಂಗ್ ಪದವೀಧರರಿಗೆ ಸಮಾನಾಗಿದ್ದ ಇಂಜಿನಿಯರಿಂಗ್ ಪದವಿಯೇತರರಿಗೆ ಪ್ರತಿಕೂಲ ನಡವಳಿಯಾಗಿ ತಾರತಮ್ಯ ಮಾಡಿದಂತಾಗುವುದಿಲ್ಲವೇ,

ಈ) ರೂ. ೧೦೫೦–೧೯೫೦ರ ವೇತನ ಶ್ರೇಣಿಯನ್ನು ಪಾಲಿಟೆಕ್ನಿಕ್‌ಗಳ ಎಲ್ಲಾ ಉಪನ್ಯಾಸಕರು ಗಳಿಗೆ ಅನ್ವಯಿಸಿ ಒಂದು ತಿದ್ದುಪಡಿ ಆದೇಶವನ್ನು ಸರ್ಕಾರ ಹೊರಡಿಸುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಇಂದ ಇ) ನೇರ ನೇಮಕಾತಿಗೆ ಇಂಜಿನಿಯರಿಂಗ್ ಪದವಿಯನ್ನು ನಿಗದಿಗೊಳಿಸಿರುವ ಪಾಲಿಟೆಕ್ನಿಕ್‌ಗಳ ಉಪನ್ಯಾಸಕರ ಹುದ್ದೆಗಳಿಗೆ ರೂ. ೧೦೫೦–೧೯೫೦ರ ವೇತನ ಶ್ರೇಣಿಯನ್ನು ನೀಡಲಂ ಪಡೀಯ(ವೇತನ) ಸಮಿತಿಯು ಶಿಫಾರಸ್ಸಿನ ಆಧಾರದ ಮೇರೆಗೆ, ಸರ್ಕಾರಿ ಆದೇಶ ಸಂಖ್ಯೆ. ಎಫ್‌ಡಿ ೫೫ ಎಸ್‌ಆರ್‌ಪಿ ೬೫ ದಿನಾಂಕ ೩೦–೧೦–೧೯೬೫ರಲ್ಲಿ ಅವಶ್ಯ ಆದೇಶಗಳನ್ನು ಹೊರಡಿಸಲಾಗಿದೆ. ಈ ಪರಿಷ್ಕೃತ ವೇತನ ಶ್ರೇಣಿ ರೂ. ೧೦೫೦–೧೯೫೦ ಲಾಭವು, ನೇರ ನೇಮಕಾತಿಗೆ ಇಂಜಿನಿಯರಿಂಗ್ ಪದವಿಯನ್ನು ಕನಿಷ್ಠ ವಿದ್ಯಾರ್ಹತೆ ಎಂದು ನಿಗದಿಗೊಳಿಸಿರುವಂತಹ ಪಾಲಿಟೆಕ್ನಿಕ್‌ಗಳ ಉಪನ್ಯಾಸಕರಂಗಳಿಗೆ